# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 103 (106)**
**ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ : 27.01.2026**
**ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲ್ಯಾಣ ಕರ್ನಾಟಕದ ವಿಭಾಗೀಯ ಕೇಂದ್ರವಾದ ಕಲಬುರಗಿ ನಗರದಲ್ಲಿ ನೈರ್ಮಲ್ಯ ಕಾಪಾಡಲು ಜನ ನಿಬಿಡ ಸ್ಥಳಗಳಲ್ಲಿ ಎಷ್ಟು ಶೌಚಾಲಯ ಮತ್ತು ಮೂತ್ರಾಲಯಗಳನ್ನು ನಿರ್ಮಿಸಲಾಗಿದೆ; ಇವುಗಳ ನಿರ್ವಹಣೆಯ ಜವಾಬ್ದಾರಿಯನ್ನು ಯಾವ ಏಜೆನ್ಸಿಗೆ ವಹಿಸಲಾಗಿದೆ ಹಾಗೂ ನಿರ್ವಹಣೆಗೆ ತಗಲುವ ವಾರ್ಷಿಕ ವೆಚ್ಚ ಎಷ್ಟು; | ಕಲಬುರಗಿ ನಗರದಲ್ಲಿ ನೈರ್ಮಲ್ಯ ಕಾಪಾಡಲು ಜನನಿಬಿಡ ಸ್ಥಳಗಳಲ್ಲಿ ಒಟ್ಟು 41 ಸಾರ್ವಜನಿಕ ಶೌಚಾಲಯಗಳನ್ನು ಮತ್ತು 48 ಸಮುದಾಯ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಸದರಿ ಶೌಚಾಲಯಗಳ ನಿರ್ವಹಣೆ ಮಾಡಲು ಸ್ಥಳೀಯ ನಿರುದ್ಯೋಗಿಗಳಿಗೆ ನೀಡಲಾಗಿದ್ದು, ಸದರಿ ಶೌಚಾಲಯಗಳ ನಿರ್ವಹಣೆಯನ್ನು ಸಾರ್ವಜನಿಕರಿಂದ ಸಂಗ್ರಹಿಸಲಾಗುವ ಸೇವಾ ಶುಲ್ಕದಿಂದಲೇ ಅವರೇ ನಿರ್ವಹಿಸುತ್ತಿರುತ್ತಾರೆ. |
| (ಆ) | ನಗರದ ಕೇಂದ್ರ ಬಸ್ ನಿಲ್ದಾಣದಿಂದ ಸೂಪರ್ ಮಾರ್ಕೆಟ್ ಮಾರ್ಗದ ರಾಷ್ಟ್ರಪತಿ ವೃತ್ತ ಮೋಹನ್ ಲಾಡ್ಜ್ ಸರ್ದಾರ್ ವಲ್ಲಭಾಯಿ ಪಟೇಲ್ ವೃತ್ತ ಸೇರಿದಂತೆ ನೂರಾರು ವಿದ್ಯಾರ್ಥಿ/ವಿದ್ಯಾರ್ಥಿನಿಯರು ಬಸ್‌ಗಾಗಿ ಕಾಯುವ ಜಯದೇವ ಆಸ್ಪತ್ರೆಯ ಎದುರು ಶೌಚಾಲಯ ಮತ್ತು ಮೂತ್ರಲಾಯಗಳಿಲ್ಲದಿರುವುದು ಹಾಗೂ ಇದ್ದರೂ ಅನೈರ್ಮಲ್ಯ ಹೆಚ್ಚಾಗಿದ್ದು ಬೀಗ ಹಾಕಿರುವುದರಿಂದ ಸಾರ್ವಜನಿಕರು ನಿಸರ್ಗ ಕರೆಗಳಿಗೆ ಪರದಾಡುವಂತಾಗಿದ್ದು, ಅಗತ್ಯವಿರುವ ಸ್ಥಳಗಳಲ್ಲಿ ಶೌಚಾಲಯ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ನಗರದ ಕೇಂದ್ರ ಬಸ್ ನಿಲ್ದಾಣದಿಂದ ಸೂಪರ್ ಮಾರ್ಕೆಟ್ ಮಾರ್ಗದ ರಾಷ್ಟ್ರಪತಿ ವೃತ್ತದಿಂದ ಮೋಹನ್ ಲಾಡ್ಜ್‌ವರೆಗೆ ಹಾಗೂ ಸರ್ದಾರ್ ವಲ್ಲಭಬಾಯಿ ಪಟೇಲ್ ವೃತ್ತದಿಂದ ಸೂಪರ್ ಮಾರ್ಕೆಟ್ ವೃತ್ತದವರೆಗೆ ಇರುವ ಶೌಚಾಲಯಗಳ ವಿವರಗಳು ಈ ಕೆಳಗಿನಂತಿದೆ:-<br>1. ಜಿಲ್ಲಾಧಿಕಾರಿಗಳ ಕಛೇರಿಯ ಮುಖ್ಯದ್ವಾರದ ಪಕ್ಕದಲ್ಲಿ: ಸದರಿ ಶೌಚಾಲಯವು ಕಾಮಗಾರಿ ಹಂತದಲ್ಲಿದೆ. (ಪುರುಷರ ಸಿಟ್:03, ಮಹಿಳೆಯರ ಸಿಟ್:03)<br>2. ಜಿಲ್ಲಾಧಿಕಾರಿಯವರ ಕಛೇರಿಯ ಆವರಣದಲ್ಲಿ. (ಪುರುಷರ ಸಿಟ್:06, ಮಹಿಳೆಯರ ಸಿಟ್:06).<br>3. ನ್ಯಾಯಾಲಯದ ಕಾಂಪೌಂಡ್ ಹತ್ತಿರ. (ಪುರುಷರ ಸಿಟ್:02, ಮಹಿಳೆಯರ ಸಿಟ್:01).<br>4. ನ್ಯಾಯಾಲಯದ ಆವರಣದಲ್ಲಿ. (ಪುರುಷರ ಸಿಟ್:03, ಮಹಿಳೆಯರ ಸಿಟ್:02).<br>5. ಜಯದೇವ ಆಸ್ಪತ್ರೆಯ ಎದುರು ಬಾಲಭವನ ಹತ್ತಿರ: ಸದರಿ ಶೌಚಾಲಯವನ್ನು ನಿರ್ವಹಣೆಗಾಗಿ ನೀಡಲಾದ ಏಜೆನ್ಸಿದಾರರು ಪ್ರಸ್ತುತ ನಿರ್ವಹಣೆ ಮಾಡದೇ ಇರುವುದರಿಂದ ಬೇರೆ ಏಜೆನ್ಸಿದಾರರಿಗೆ ನಿರ್ವಹಣೆ ಮಾಡಲು ಶೀಘ್ರದಲ್ಲಿ ವಹಿಸಲಾಗುವುದು. (ಪುರುಷರ ಸಿಟ್:02, ಮಹಿಳೆಯರ ಸಿಟ್:01)<br>6. ಗುಲಶನ್ ಗಾರ್ಡನ್ ಗೇಟಿನ ಹತ್ತಿರ. (ಪುರುಷರ ಸಿಟ್:03, ಮಹಿಳೆಯರ ಸಿಟ್:03).<br>7. ಜಗತ್ ಸರ್ಕಲ್ ಬಸವೇಶ್ವರ ಮೂರ್ತಿಯ ಹತ್ತಿರ. (ಪುರುಷರ ಸಿಟ್:03, ಮಹಿಳೆಯರ ಸಿಟ್:03).<br>8. ತಾಲ್ಲೂಕು ಕಛೇರಿಯ ಕಾಂಪೌಂಡ್ ಹತ್ತಿರ. (ಪುರುಷರ ಸಿಟ್:03, ಮಹಿಳೆಯರ ಸಿಟ್:03).<br>9. ತರಕಾರಿ ಮಾರುಕಟ್ಟೆ ಒಳಗಡೆ ಸೂಪರ್ ಮಾರ್ಕೆಟ್. (ಪುರುಷರ ಸಿಟ್:02, ಮಹಿಳೆಯರ ಸಿಟ್:02).<br><br>ಇದಲ್ಲದೆ, ಅವಶ್ಯಕತೆ ಇರುವ ಸ್ಥಳಗಳಲ್ಲಿ ಪಾಲಿಕೆವತಿಯಿಂದ ಶೌಚಾಲಯಗಳನ್ನು ನಿರ್ಮಿಸಲಾಗುವುದು. |

**ನಅಇ 4 ಎಸಿಜಿ 2026(ಇ)**

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು